# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 927(901)
ಸದಸ್ಯರ ಹೆಸರು : ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 23-02-2024
ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ: 15.12.2023 ರಂದು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ವಿಧಾನಸೌಧ, ವಿಕಾಸಸೌಧ ಮತ್ತು ಶಾಸಕರ ಭವನದ ಆವರಣದಲ್ಲಿ ವಿಶ್ವಕರ್ಮ ಸಮಾಜದ ಭಗವಾನ್ ವಿಶ್ವಕರ್ಮ ಅಥವಾ ಅಮರಶಿಲ್ಪಿ ಜಕ್ಕಣಾಚಾರಿ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರವು ಭರವಸೆ ನೀಡಿದ್ದು ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ತೀರ್ಮಾನಿಸಿದೆಯೇ; | ಸರ್ಕಾರದ ಸುತ್ತೋಲೆ ಸಂಖ್ಯೆ:ಕಸಂವಾಪ್ರ/564/ಕಸಧ/2012, ದಿನಾಂಕ: 11.06.2021ರಲ್ಲಿ ಸರ್ಕಾರದ/ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್.ಎಲ್.ಪಿ (ಸಿವಿಲ್) ಸಂಖ್ಯೆ: 8519/2006 ಪ್ರಕರಣದಲ್ಲಿ ದಿನಾಂಕ: 18/01/2013 ರಂದು ನೀಡಿದ ತೀರ್ಪಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆ ಪುತ್ಥಳಿ ಮತು ಇತ್ಯಾದಿಗಳನ್ನು ನಿರ್ಮಿಸುವುದನ್ನು ನಿಷೇಧಿಸಿರುತ್ತದೆ.<br><br>ಚಾಲ್ತಿಯಲ್ಲಿರುವ ನಿಯಮಗಳನ್ವಯ ಹಾಗೂ ಇಲಾಖೆಯಲ್ಲಿನ ಅನುದಾನದ ಲಭ್ಯತೆಗೊಳಪಟ್ಟು ಪರಿಶೀಲಿಸಲಾಗುವುದು. |
| ಆ) | ತೀರ್ಮಾನಿಸದಿದ್ದಲ್ಲಿ, ದೇಶಕ್ಕೆ ವಿಶ್ವಕರ್ಮ ಸಮಾಜ ನೀಡಿರುವ ಕೊಡುಗೆಗಳ ಕಡೆ ಗಮನ ಹರಿಸಿ ಈ ಸಮಾಜದ ಬಗ್ಗೆ ಮಲತಾಯಿ ಧೋರಣೆ ತಾಳದೇ ಸರ್ಕಾರ ಜಕ್ಕಣಾಚಾರಿ ಪ್ರತಿಮೆ ನಿರ್ಮಿಸಲು ಕ್ರಮಕೈಗೊಳ್ಳುವುದೇ? | ವಿಶ್ವಕರ್ಮ ಜಯಂತಿಯನ್ನು ಹಾಗೂ ಅಮರಶಿಲ್ಪಿ ಜಕ್ಕಣಚಾರಿ ಜಯಂತಿಯನ್ನು ಪ್ರತಿ ವರ್ಷ ರಾಜ್ಯಾದ್ಯಂತ ಸರ್ಕಾರದಿಂದ ಆಚರಣೆ ಮಾಡಿಕೊಂಡು ಬರಲಾಗುತ್ತಿದ್ದು, ಸದರಿ ಮಹನೀಯರ ಕೊಡುಗೆಗಳ ಬಗ್ಗೆ ಸ್ಮರಣೆ ಮಾಡಿಕೊಳ್ಳುವ ಮೂಲಕ ಗೌರವಿಸಲಾಗುತ್ತಿದೆ.<br><br>ವಿಧಾನಸೌಧ, ವಿಕಾಸಸೌಧ ಮತ್ತು ಶಾಸಕರ ಭವನದ ಆವರಣದಲ್ಲಿ ವಿಶ್ವಕರ್ಮ ಸಮಾಜದ ಭಗವಾನ್ ವಿಶ್ವಕರ್ಮ ಅಥವಾ ಅಮರಶಿಲ್ಪಿ ಜಕ್ಕಣಾಚಾರಿ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಚಾಲ್ತಿಯಲ್ಲಿರುವ ನಿಯಮಗಳನ್ವಯ ಹಾಗೂ ಇಲಾಖೆಯಲ್ಲಿನ ಅನುದಾನದ ಲಭ್ಯತೆಗೊಳಪಟ್ಟು ಪರಿಶೀಲಿಸಲಾಗುವುದು. |

ಸಂಖ್ಯೆ: ಕಸಂವಾ 23 ಕವಿಸ 2024

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.